ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ತಾಲ್ಲೂಕಿನ ತಿಗಡಿ ಗ್ರಾಮದ ಹತ್ತಿರ ನಿರ್ಮಿಸಲಾದ ಹರಿನಾಲಾ ಯೋಜನೆಯ ಅಣೆಕಟ್ಟಿನಿಂದಾಗಿ ನಾವಲಗಟ್ಟಿ ಗ್ರಾಮ ಭಾಗಶಃ ಭಾದಿತವಾದಂಥದ್ದು ಮತ್ತು ಕೇಂದ್ರೀಯ ಜಲ ಆಯೋಗದ ಮಾರ್ಗಸೂಚಿಯ ಪ್ರಕಾರ M.W.L. ಮಟ್ಟದ ಒಳಗೆ ಬರುವ ಕಟ್ಟಡಗಳನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಬೇಕೆಂದು ಇರುತ್ತದೆ. ಭಾರತ ಸರ್ಕಾರದ ಆ ನಾರ್ಮ್ಸ್ ಏನಿದೆ ಅದರ ಪ್ರಕಾರ ಪರಿಹಾರವನ್ನು ಕೊಡಬೇಕಾಗುತ್ತದೆ. ಆ ನಾರ್ಮ್ಸ್‌ನಲ್ಲಿ ಇದು ಬಾರದಿರುವ ಕಾರಣ ಯಾವ ಭಾಗ ಮುಳುಗಡೆಯಾಗುತ್ತದೆ. ಅಷ್ಟಕ್ಕೆ ಮಾತ್ರ ಪರಿಹಾರವನ್ನು ಕೊಡತಕ್ಕದ್ದನ್ನು ಮಾಡಿದ್ದೇವೆ. ಅಧಿಕಾರಿಗಳು ಕೂಡ ಸಮೀಕ್ಷೆ ಮಾಡಿದ್ದಾರೆ. ಅವರು ಅಧಿಕಾರಿಗಳು ಸರಿಯಾಗಿ ಸಮೀಕ್ಷೆ ಮಾಡಿಲ್ಲ. ನೋಡಿಲ್ಲವೆಂದು ಹೇಳಿದ್ದಾರೆ. ನಮ್ಮ ಮಾಹಿತಿ ಪ್ರಕಾರ 58 ಮನೆಗಳು ಮಾತ್ರ ಮುಳುಗಡೆಯಲ್ಲಿ ಬಾದಿತವಾಗುವ ಸಾಧ್ಯತೆ ಇದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಆಗುತ್ತದೆಂದು ಅವರು ಹೇಳಿದ್ದಾರೆ. ಅದಕ್ಕೆ ನಾನು ಇದರ ಬಗ್ಗೆ ಪುನರ್‌ಪರಿಶೀಲನೆ ಮಾಡಿಸಿ ನಿಜವಾಗಿಯೂ ತೊಂದರೆಯಾದರೆ ಅದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಬೆಂಗಳೂರಿನಲ್ಲಿ ನಕಲಿ ಸಿಡಿ ಮಾರಾಟವಾಗುತ್ತಿರುವ ಬಗ್ಗೆ

62(1048) ಶ್ರೀ ಸೋಮಣ್ಣ ಎ. (ಬಿನ್ನಿಪೇಟೆ): – ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಕಲಿ ಆಡಿಯೋ ಕ್ಯಾಸೆಟ್ ಹಾಗೂ ಸಿ.ಡಿ.ಗಳು ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಬರತಕ್ಕ ವಾಣಿಜ್ಯ ತೆರಿಗೆಯಲ್ಲಿ ನಷ್ಟವಾಗುತ್ತಿಲ್ಲವೇ;

ಇ) ಈ ನಕಲಿ ಕ್ಯಾಸೆಟ್ ಹಾಗೂ ಸಿ.ಡಿ. ಮಾರಾಟವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು.

ಆ) ಕರ್ನಾಟಕ ಮಾರಾಟ ತೆರಿಗೆ ಕಾಯಿದೆ 1957ರಡಿಯಲ್ಲಿ ಎಲ್ಲಾ ಆಡಿಯೋ ಕ್ಯಾಸೆಟ್ ಮತ್ತು ಸಿ.ಡಿ. (ನಕಲಿ ಅಥವಾ ಅಸಲಿ) ಮಾರಾಟದ ಮೇಲೆ ತೆರಿಗೆಯನ್ನು ಪಾವತಿ ಮಾಡಬೇಕಾಗಿರುತ್ತದೆ. ಈ ಕಾರಣದಿಂದ ಸರ್ಕಾರಕ್ಕೆ ಯಾವುದೇ ತೆರಿಗೆ ನಷ್ಟವಾಗುತ್ತಿಲ್ಲ.

ಇ) ಬೆಂಗಳೂರು ನಗರದ ಠಾಣೆಗಳ ವ್ಯಾಪ್ತಿಯಲ್ಲಿರುವ ಕ್ಯಾಸೆಟ್ ಹಾಗೂ ಸಿ.ಡಿ. ಮಾರಾಟ ಅಂಗಡಿಗಳ ಮೇಲೆ ನಿಗಾ ಇಡಲಾಗಿದ್ದು ನಕಲಿ ಕ್ಯಾಸೆಟ್ ಹಾಗೂ ಸಿ.ಡಿ.ಗಳ ಮಾರಾಟ ಮಾಡುತ್ತಿರುವುದು ಕಂಡು ಬಂದಲ್ಲಿ ಅಥವಾ ನಿಖರ ಮಾಹಿತಿ ಲಭ್ಯವಾದಲ್ಲಿ ಅಂತಹ ಅಂಗಡಿಗಳ ಮೇಲೆ ದಾಳಿ ಮಾಡಿ ಕಲಂ 292–429 ಹೆಚ್ಚಿ/51 (ಬಿ), 52 (ಒ), 63–65 (ಎ) ಕಾಪಿ ರೈಟ್ ಆಕ್ಟ್ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ವಿ. ಸೋಮಣ್ಣ:– ಮಾನ್ಯ ಅಧ್ಯಕ್ಷರೆ, ನಕಲಿ ಕ್ಯಾಸೆಟ್‌ಗಳ ಹಾವಳಿ ಬೆಂಗಳೂರು ನಗರದಲ್ಲಿ ಸಾಕಷ್ಟು ಇದೆ ಎಂಬ ಅರಿವು ಸರ್ಕಾರಕ್ಕಿದೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂದರೆ, ಈಗ ಏನು ಕಾನೂನು ಇದೆ ಅದರ ಪ್ರಕಾರ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಇವತ್ತು ನಕಲಿ ಕ್ಯಾಸೆಟ್‌ನ್ನು ಮಾರಾಟ ಮಾಡುವ ಜಾಲವೇನಿದೆ ಅದನ್ನು ಹಿಡಿಯುತ್ತಾರೆ. ಅಲ್ಲಿ ಕೆಲಸ ಮಾಡುವಂಥ ಯಾರನ್ನೋ ಹಿಡಿಯುತ್ತಾರೆ. ಇದಕ್ಕೆ ಯಾರು ಕಾರಣಕರ್ತರಾಗಿದ್ದಾರೆ ಅಂತವರನ್ನು ಇವತ್ತಿನವರೆಗೆ ಹಿಡಿದು ಶಿಕ್ಷೆಗೆ ಗುರಿ ಮಾಡಿದಂಥ ಯಾವುದೇ ಉದಾಹರಣೆ ಇಲ್ಲ. ಈ ರೀತಿ ಸಂಬಂಧಪಟ್ಟವರನ್ನು ಕಾನೂನಿನ ಚೌಕಟ್ಟಿನೊಳಗೆ ಶಿಕ್ಷೆಗೆ ಗುರಿಪಡಿಸಬೇಕಾಗಿದೆ. ನಮ್ಮಲ್ಲೇನು ಕಾಪಿರೈಟ್ ಆಕ್ಟ್ 63 (ಎ) ಇದೆ ಅದರ ಪ್ರಕಾರ ಕ್ರಮ ತೆಗೆದುಕೊಂಡು ಯಾರನ್ನೋ ತೆಗೆದುಕೊಂಡು ಕೋರ್ಟ್‌ಗೆ ಪ್ರೊಡ್ಯೂಸ್ ಮಾಡುತ್ತಾರೆ. ಅದಾದಮೇಲೆ ಆ ಹುಡುಗರನ್ನು ಬಿಡಿಸಿಕೊಂಡು ಬರುತ್ತಾರೆ. ಆದರೆ ಇವತ್ತಿನವರೆಗೆ ಕೋರ್ಟ್‌ನಲ್ಲಿ ಒಬ್ಬರಿಗೂ ಶಿಕ್ಷೆಯಾಗಿಲ್ಲ. ತಮಿಳುನಾಡಿನಲ್ಲಿ ಈ ರೀತಿ ನಕಲಿ ಕ್ಯಾಸೆಟ್ ಬಗ್ಗೆ ಕಾನೂನನ್ನು ತಿದ್ದುಪಡಿ ಮಾಡಿ ಆ ಕಾನೂನಿನ ಚೌಕಟ್ಟಿನಲ್ಲಿ ಇದಕ್ಕೆ ಯಾರು ಹೊಣೆಗಾರರಾಗಿರುತ್ತಾರೆ ಆ ರೀತಿ ಹೊಣೆಗಾರರಾಗಿರುವವರನ್ನೇ ತೆಗೆದುಕೊಂಡು ಹೋಗಿ ಸುಮಾರು ಜನ ಈಗಾಗಲೇ ಕಾನೂನಿನ ಚೌಕಟ್ಟಿನಲ್ಲಿ ಬಂದು ಅವರಿಗೆ ಶಿಕ್ಷೆಯಾಗಿರತಕ್ಕದ್ದು ಇದೆ. ಆ ರೀತಿ ನಮ್ಮಲ್ಲೂ ಮಾಡಿದರೆ ಅದರಿಂದ ಸರ್ಕಾರದ ಬೊಕ್ಕಸಕ್ಕೂ ಹಣ ಬರುತ್ತದೆ. ನೋಡತಕ್ಕವರಿಗೆ ಕ್ವಾಲಿಟಿ ಆಫ್ ಕ್ಯಾಸೆಟ್ ಏನಿದೆ ಅದು ಡೂಪ್ಲಿಕೇಟ್ ಆಗಿರುವುದರಿಂದ, ರಾಜಾರೋಷವಾಗಿ ಆಗುತ್ತಿರುವ ಈ ವ್ಯವಸ್ಥೆ ನಿಲ್ಲಬೇಕಾದರೆ, ತಮ್ಮ ಮೂಲಕ ಉಪಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ. ಈಗ ಏನು ನಮ್ಮಲ್ಲಿ ಆಕ್ಟ್ ಇದೆ ಇದರಲ್ಲಿ ಸರಿಯಾದ ಯಾವುದೇ ನಿಬಂಧನೆ ಇಲ್ಲದಿರುವುದರಿಂದ ಪೊಲೀಸ್‌ನವರು ಮಾಡತಕ್ಕ ಕೇಸುಗಳೇನಿದೆ ಅದು ಯಾವುದೂ ಕೂಡ ಕೋರ್ಟ್‌ನಲ್ಲಿ ಸರಿಯಾದ ಶಕ್ತಿಯನ್ನು ತುಂಬುವ ವ್ಯವಸ್ಥೆ ಇಲ್ಲದಿರುವುದರಿಂದ ಇದಕ್ಕೆ ಪರ್ಯಾಯವಾದ ಕಾನೂನನ್ನು ತಮಿಳುನಾಡಿನವರು ಯಾವ ರೀತಿಯಾಗಿ ಮಾಡಿದ್ದಾರೆ ಆ ರೀತಿ ಮಾಡಿ ನಕಲಿ ಕ್ಯಾಸೆಟ್ ಮಾಡತಕ್ಕ ತಪ್ಪಿತಸ್ಥರೇನಿದ್ದಾರೆ ಅವರಿಂದ ದೊಡ್ಡ ಹಗಲು ದರೋಡೆಯಾಗಿದೆ. ಇದಕ್ಕೆ ಏನಾದರೂ ಸರಿಯಾದ ರೂಪ ಕೊಡುವ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆಯೇ ಎನ್ನುವುದನ್ನು ತಮ್ಮ ಮೂಲಕ ಉಪ ಮುಖ್ಯಮಂತ್ರಿಯವರನ್ನು ಕೇಳಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು): – ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಣ್ಣನವರು ಹೇಳಿರತಕ್ಕದ್ದು ನಿಜ. ನಕಲಿ ವಿಡಿಯೋ ಕ್ಯಾಸೆಟ್‌ಗಳು ಆಗುತ್ತಿದೆ. ನಾವು ಕಾನೂನಿನ ಪ್ರಕಾರ ಕ್ಯಾಸೆಟ್ ಮಾಡುವುದರ ಮೇಲೆ 12 ಪರ್‌ಸೆಂಟ್ ತೆರಿಗೆ ವಸೂಲಿ ಮಾಡುತ್ತೇವೆ. ಕಾನೂನು ಬಿಟ್ಟು ಕಾನೂನು ಬಾಹಿರವಾಗಿ ಮಾಡುವುದನ್ನು ಕಂಡುಹಿಡಿಯುವುದು ನಮಗೆ ಬಹಳ ಕಷ್ಟ. ಪೊಲೀಸ್‌ನವರು ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ತಪ್ಪು

ಮಾಡಿದವರ ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡು ಶಿಕ್ಷೆಗೆ ಒಳಪಡಿಸುವುದು ಪೊಲೀಸ್‌ನವರು ಕೆಲಸ. ತೆರಿಗೆ ವಸೂಲಿ ಮಾಡತಕ್ಕ ಕೆಲಸ ನಮ್ಮದು. ತೆರಿಗೆ ಕೊಡದೇನೇ ಕಾಪಿರೈಟ್ ಇಲ್ಲದೇನೇ ಮಾಡತಕ್ಕದ್ದು. ಕಾನೂನು ಬಾಹಿರವಾಗಿ ಮಾಡತಕ್ಕದಕ್ಕೆ ನಮ್ಮ ಇಂಟಲಿಜೆನ್ಸ್ ಮೂಲಕ ಏನು ಮಾಡಬೇಕೊ ಅದನ್ನೆಲ್ಲ ಮಾಡುತ್ತಿದ್ದೇವೆ. ಆದರೂ ಕೂಡ ಈ ಹಾವಳಿ ಹೆಚ್ಚಾಗಿದೆ ಎಂಬುದು ನಿಜ. ಅದಕೋಸ್ಕರ ಈ ಸಲ ಬಜೆಟ್ ಭಾಷಣದಲ್ಲಿ ಗುಂಡಾ ಆಕ್ಟ್‌ಗೆ ತಿದ್ದುಪಡಿ ತರಬೇಕು. ತಮಿಳುನಾಡಿನಲ್ಲೇನು ಮಾಡಿದ್ದಾರೆ ಅದೇ ರೀತಿ ಇಲ್ಲೂ ಕೂಡ ತಿದ್ದುಪಡಿ ಮಾಡಬೇಕೆಂದು ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ತಿದ್ದುಪಡಿ ತಂದು ಕಾನೂನನ್ನು ಭದ್ರಪಡಿಸಿ ಅವರಿಗೆ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆಗೆ ಒಳಪಡಿಸುವುದಕ್ಕೆ ಆ ಅಪರಾಧವನ್ನು ತಡೆಗಟ್ಟಲು ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ. ಈಗಾಗಲೇ ನಾವು ಅದರ ಬಗ್ಗೆ ಚಿಂತನೆ ಮಾಡಿದ್ದೇವೆ.

ಅಧ್ಯಕ್ಷರು:– ಶ್ರೀ ನಿರ್ಮಲ ಸುರಾನಾರವರು ಗೈರು ಹಾಜರಾಗಿದ್ದರು. ಪ್ರಶ್ನೋತ್ತರ ವೇಳೆ ಮುಗಿದಿದೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಇ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹಾಗೂ ಉತ್ತರಗಳು (ಅನುಬಂಧ–1)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು):– ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 15ನೇ ಪಟ್ಟಿಯಲ್ಲಿರುವ 188 ಪ್ರಶ್ನೆಗಳ ಪೈಕಿ 156 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದಿಡುತ್ತೇನೆ. (ಅನುಬಂಧ–1)

ಅಧ್ಯಕ್ಷರು:– ಮಂಡಿಸಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ರಾಜ್ಯದಲ್ಲಿ ಪಡಿತರ ಚೀಟಿಗಳ ಸಮೀಕ್ಷೆ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): – ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಯವರು ಇರುವುದರಿಂದ ಈ ಸದನದ ಎಲ್ಲಾ ಸದಸ್ಯರಿಗೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ನಾನು ಪ್ರಸ್ತಾಪ ಮಾಡಿದ್ದೇನೆ. ಯಾವ ಸೂಚನೆ ಎಂಬುದು ಮುಖ್ಯವಲ್ಲ. ಯಾವ ರೂಲ್ ಅಡಿಯಲ್ಲಿ ತೆಗೆದುಕೊಳ್ಳಬೇಕು ಎಂಬುದು ಮುಖ್ಯವಲ್ಲ. ಈ ಸರ್ಕಾರಕ್ಕೆ ಇಲ್ಲಿರುವಂಥ 224 ಜನ ಶಾಸಕರಿಗೆ, ರಾಜ್ಯದ ಜನತೆಗೆ ಅನ್ಯಾಯವಾಗಬಾರದು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಗೌರವ ಸಿಗಬೇಕು. ಆ ರೀತಿ ಪ್ರಮುಖವಾದ ವಿಷಯ. ಪಡಿತರ ಚೀಟಿಯ ಸಮೀಕ್ಷೆ ಒಂದು ತಿಂಗಳ ಕಾಲ ನಾಳೆ ಇಲ್ಲವೆ ನಾಡಿದ್ದರಿಂದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಮಾಡಬೇಕೆಂದು ತಾವು ತೀರ್ಮಾನ ಮಾಡಿದ್ದೀರಿ. ಕಳೆದ ಒಂದು ವರ್ಷದಲ್ಲಿ ತಾವು ಎರಡು ಬಾರಿ ಈಗಾಗಲೇ ಸಮೀಕ್ಷೆಯನ್ನು ಮಾಡಿದ್ದೀರಿ. ಎಲ್ಲೊ ಒಂದು ಕಡೆ ಸರ್ಕಾರದ ಮನಸ್ಸಿನಲ್ಲಿ ಪಡಿತರ ವ್ಯವಸ್ಥೆಯೊಳಗೆ ಸಿಗುತ್ತಿರುವ